

ಎಲ್ಲವನ್ನೂ ದಾನ ಮಾಡಿ ರಾಜ್ಯವನ್ನು ತ್ಯಜಿಸುತ್ತಿರುವ ಹರಿಶ್ಚಂದ್ರ

ಹೊಡೆದು ಬೆಂಡಾಗಿ ಬೀಳ್ವಮಗೆ ನೀನೊಲಿದು ಮಣಿ
ದೊಡಿಗೆಗಳನಿತ್ತು ಫಲವೇನು ಭೂನಾಥ ಹೇಳೆನುತ ಮತ್ತಿಂತೆಂದರು

ಹರಿಶ್ಚಂದ್ರ ಕಾವ್ಯದ ಹರಿಶ್ಚಂದ್ರ–ಹೊಲತಿಯರ ಸಂವಾದ ಪ್ರಸಿದ್ಧವಾದದ್ದು. ಇಡಿಯ ವಾಕ್ಯರಚನೆಯನ್ನೇ ಮತ್ತೆಮತ್ತೆ ಬಳಸುವ ಮೂಲಕ ಕವಿ ಆ ಹುಡುಗಿಯರು ಕೇಳುವ ಅಹಿತಕರ ಪ್ರಶ್ನೆಗಳಿಗೆ ಹೆಚ್ಚಿನ ಬಲ ತಂದುಕೊಟ್ಟಿದ್ದಾನೆ. ಈ ಪದ್ಯದಲ್ಲಿ 'ಫಲವೇನು' ಶಬ್ದಗಳ ಮರುಬಳಕೆಯಿಂದ ನಾಲ್ಕು ವಿಭಿನ್ನ ಹೋಲಿಕೆಗಳನ್ನು ಬಂದು ಬಂಧದಲ್ಲಿ ಕಟ್ಟಿದ್ದಾನೆ.

ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ
ತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ ರೂಪನೆಱೆ
ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ ಮುಡಿಗಳಿಂ ಸುಳಿವ ತಂಗಾಳಿಯಿಂ
ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ
ನಾಡೆ ಹೊಲೆಯಿಲ್ಲ ಸೋಂಕಿಂಗೆ ಹೊಲೆಯುಂಟಾಯ್ತೆ
ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮವೊಂದಧಿಕವೇ

ಇದೇ ರೀತಿ 'ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ' ಎಂದು ಆರಂಭವಾಗುವ ಪದ್ಯದಲ್ಲಿ 'ಹೊಲೆಯಿಲ್ಲ' ಪದವನ್ನು ನಾಲ್ಕು ಬಾರಿ ಬಳಸಲಾಗಿದೆ. ಹೀಗೆ ಈ ಪುನರುಕ್ತಿ ಹೊಲತಿಯರ ವಾದಕ್ಕೆ ವಿಶೇಷ ತಾರ್ಕಿಕಬಲ ತಂದುಕೊಟ್ಟಿದೆ.